ಶನಿವಾರ, 10 ಮಾರ್ಚ್ 2018 | ಪುಟಗಳು: 18+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 224
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿ
PRID



ತಾರಕಕ್ಕೇರಿದ ಕ್ರಿಕೆಟರ್ ಶಮಿ-ಪತ್ನಿ ಕಲಹ: ಕಿರುಕುಳ, ಅತ್ಯಾಚಾರದ ಕೇಸು ದಾಖಲು P15



ನನಗೆ ನನ್ನ ಮಿತಿಗಳು ಗೊತ್ತಿದ್ದವು, ಹಾಗಾಗಿ ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಮಾಡಿದ್ದು: ಸೋನಿಯಾ ಗಾಂಧಿ

ಐಎನ್‌ಎಕ್ಸ್ ಮೀಡಿಯಾ ಹಗರಣ: ಕಾರ್ತಿ ಬಂಧನಕ್ಕೆ ಮಾ.20ರವರೆಗೆ ಕೋರ್ಟ್ ತಡೆ P1

# 'ಸಹ್ಯಾದ್ರಿ ವಿಝ್' ಗ್ರ್ಯಾಂಡ್ ಫಿನಾಲೆ

**ಮಂಗಳೂರು:** ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅ್ಯಂಡ್ ಮ್ಯಾನೇಜ್ಮೆಂಟ್‌ನ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗ ವತಿಯಿಂದ ಏರ್ಪಡಿಸಲಾದ ಅಂತರ್ ಕಾಲೇಜು ರಸಪ್ರಶ್ನೆಸ್ಪರ್ಧೆ 'ಸಹ್ಯಾದ್ರಿ ವಿಝ್ ರಸಪ್ರಶ್ನೆ-2018' ಶುಕ್ರವಾರ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆಯಿತು.

ಮಂಗಳೂರು, ಉಡುಪಿ, ಕೊಡಗು, ಕಾರವಾರ ಮತ್ತು ಕಾಸರಗೋಡಿನಲ್ಲಿ ಆಯ್ಕೆಯಾದ 50 ಕಾಲೇಜುಗಳಲ್ಲಿ ಸುಮಾರು 7,000 ವಿದ್ಯಾರ್ಥಿಗಳು ಕಾಲೇಜು ಮಟ್ಟದ ಸುತ್ತಿನಲ್ಲಿ ಪಾಲ್ಗೊಂಡಿದ್ದರು. ಅದರಲ್ಲಿ 950 ವಿದ್ಯಾರ್ಥಿಗಳು ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಗ್ರ್ಯಾಂಡ್ ಫಿನಾಲೆಗಾಗಿ ಆಯ್ಕೆಯಾದರು. ಮುಖ್ಯ ಅತಿಥಿಯಾಗಿ ಎಚ್‌ಡಿಎಫ್‌ಸಿ ಲಿಮಿಟೆಡ್ ಕರ್ನಾಟಕ ಮತ್ತು ಗೋವಾದ ವಾಣಿಜ್ಯೋದ್ಯಮಿ ಕಾಮಾಕ್ಯ ಪ್ರಸಾದ್ ಅಗರ್ವಾಲ್ ಮತ್ತು ಇ ವೈ ಅಸೋಸಿಯೇಟ್ಸ್ ಎಲ್‌ಎಲ್‌ಪಿ ಹಣಕಾಸು ಖಾತೆ ಲೆಕ್ಕಪರಿಶೋಧನಾ ಸೇವೆಗಳ ನಿರ್ದೇಶಕ ಪ್ರದೀಪ್ ಸುರೇಶ್ ಭಾಗವಹಿಸಿದ್ದರು.

ಮುಖ್ಯ ಸಂಯೋಜಕಿ ಪ್ರೊಫೆಸರ್ ಗಾಯತ್ರಿ ಶೆಟ್ಟಿ ಸ್ವಾಗತಿಸಿದರು. ಎಂಬಿಎ ನಿರ್ದೇಶಕ ಡಾ.ವಿಶಾಲ್ ಸಮರ್ಥ, ಸಹ್ಯಾದ್ರಿ ಮತ್ತು ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗವನ್ನು ಪರಿಚಯಿಸಿದರು.

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಪ್ರಿನ್ಸಿಪಾಲ ಡಾ.ಉಮೇಶ್ ಎಂ.ಭುಶಿ ಅಧ್ಯಕ್ಷತೆ ವಹಿಸಿದ್ದರು. ಸಹ್ಯಾದ್ರಿ ವಿಝ್ ರಸಪ್ರಶ್ನೆ ಸಂಯೋಜಕ ಪ್ರೊಫೆಸರ್ ರಮೇಶ್ ಕೆ.ಜಿ. ವಂದಿಸಿದರು.

3 ವಿದ್ಯಾರ್ಥಿಗಳ 150 ತಂಡಗಳು ಎರಡನೇ ಪ್ರಾಥಮಿಕ ಸುತ್ತಿನ ಅರ್ಹತೆ ಪಡೆದಿವೆ. ಅಂತಿಮವಾಗಿ ಗ್ರ್ಯಾಂಡ್ ಫಿನಾಲೆಗಾಗಿ 6 ತಂಡಗಳನ್ನು ಆಯ್ಕೆ ಮಾಡಲಾಯಿತು. ಮಣಿಪಾಲ ವಾಣಿಜ್ಯ ಕಾಲೇಜು ವಿದ್ಯಾರ್ಥಿಗಳ ತಂಡ ಪ್ರಥಮ, ಎಸ್‌ಡಿಎಂ ಉಜಿರೆ ದ್ವಿತೀಯ ಮತ್ತು ಸೈಂಟ್ ಅಲೋಶಿಯಸ್ ಕಾಲೇಜು 3 ನೇ ಸ್ಥಾನ ಪಡೆದವು. ರಾಮಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮಾರಲ್ ಅ್ಯಂಡ್ ಸ್ಪಿರಿಚುಯಲ್ ಇನ್‌ಸ್ಟಿಟ್ಯೂಷನ್ಸ್, ಮೈಸೂರು ಮತ್ತು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ಅಧ್ಯಕ್ಷ ಜಯರಾಜ್ ರೈ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

+ ಶನಿವಾರ, ಮಾರ್ಚ್ 10, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 69 | ಪುಟ 22 + 4 + 2
www.prajavani.net
f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಭೂಮಿಕಾ
ಹೆಣ್ಣು:
ಬಹುಕಾರ್ಯ ಚತುರೆ

4.5ಲಕ್ಷ ಅಂಗನವಾಡಿಗಳಲ್ಲಿ ಶೌಚಾಲಯ ಇಲ್ಲ 8

ಉಡುಪಿ ಡಿಸಿ ವಿರುದ್ಧ ಬಂಧನ ವಾರೆಂಟ್ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ | ಬೆಳ್ಳಿ | ₹/$ |
|---|---|---|---|---|
| 33,307 | 10,226 | ₹30,533 | ₹38,700 | 65.17 |




ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನಡೆದ ಸಹ್ಯಾದ್ರಿ ವಿಝ್ ರಸಪ್ರಶ್ನೆ ಸ್ಪರ್ಧೆಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

## ‘ಸಹ್ಯಾದ್ರಿ ವಿಜ್ ರಸಪ್ರಶ್ನೆ 2018’ ಗ್ರ್ಯಾಂಡ್ ಫಿನಾಲೆ

# ಮಣಿಪಾಲ್ ವಾಣಿಜ್ಯ ಕಾಲೇಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆಂಡ್ ಮ್ಯಾನೇಜ್‌ಮೆಂಟ್‌ನ ಉದ್ಯಮಾಡಳಿತ ವಿಭಾಗವು ಆಯೋಜಿಸಿದ್ದ ‘ಸಹ್ಯಾದ್ರಿ ವಿಝ್ ರಸಪ್ರಶ್ನೆ-2018’ ಸ್ಪರ್ಧೆಯಲ್ಲಿ ಮಣಿಪಾಲ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳ ತಂಡ ಪ್ರಥಮ ಸ್ಥಾನ ಪಡೆಯಿತು.

ಪ್ರಥಮ ಬಹುಮಾನ ₹25ಸಾವಿರ ಮಣಿಪಾಲ ಕಾಲೇಜಿನ ವಿದ್ಯಾರ್ಥಿಗಳ ಪಾಲಾಯಿತು. 2 ನೇ ಸ್ಥಾನ ಪಡೆದ ಉಜಿರೆ ಎಸ್‌ಡಿಎಂ ಕಾಲೇಜಿಗೆ ₹15 ಸಾವಿರ ನಗದು, 3 ನೇ ಸ್ಥಾನ ಪಡೆದ ನಗರದ ಸೇಂಟ್ ಅಲೋಶಿಯಸ್ ಕಾಲೇಜಿಗೆ ₹10ಸಾವಿರ ಬಹುಮಾನ ನೀಡಲಾಯಿತು.

ಪದವಿಪೂರ್ವ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಅಂತರ-ಕಾಲೇಜು ರಸಪ್ರಶ್ನೆ ಸ್ಪರ್ಧೆಯಲ್ಲಿ ಮಂಗಳೂರು, ಉಡುಪಿ, ಕೊಡಗು, ಕಾರವಾರ ಮತ್ತು ಕಾಸರಗೋಡಿನಲ್ಲಿ ಆಯ್ಕೆಯಾದ 50 ಕಾಲೇಜುಗಳ 950 ವಿದ್ಯಾರ್ಥಿಗಳು ಗ್ರ್ಯಾಂಡ್ ಫಿನಾಲೆಗಾಗಿ ಆಯ್ಕೆಯಾಗಿದ್ದರು.

ಮುಖ್ಯ ಅತಿಥಿಯಾಗಿದ್ದ ಎಚ್‌ಡಿಎಫ್‌ಸಿ ಲಿಮಿಟೆಡ್‌ನ ಕರ್ನಾಟಕ ಮತ್ತು ಗೋವಾದ ವಾಣಿಜ್ಯೋದ್ಯಮಿ ಕಾಮಾಕ್ಯ ಪ್ರಸಾದ್ ಅಗರವಾಲ್ ಮಾತನಾಡಿ, ಯಶಸ್ಸು ಅಂತ್ಯವಲ್ಲ. ಅದು ಪ್ರಯಾಣ ಎಂದು ಉಲ್ಲೇಖಿಸಲಾಗಿದೆ. ಯಶಸ್ಸನ್ನು ಎದುರಿಸಲು, ಉದ್ದೇಶಿತ ಗುರಿ ತಲುಪುವ ಛಲ ಇರಬೇಕು. ಸಹ್ಯಾದ್ರಿ ವಿಝ್ ರಸಪ್ರಶ್ನೆಯನ್ನು ಗೆಲ್ಲುವುದೊಂದೇ ಗುರಿ ಇರಬಾರದು ಎಂದರು.

ಇ ಆಂಡ್ ವೈ ಅಸೋಸಿಯೇಟ್ಸ್ ಎಲ್‌ಎಲ್‌ಪಿ ಲೆಕ್ಕಪರಿಶೋಧನಾ ಸೇವೆಗಳ ನಿರ್ದೇಶಕ ಪ್ರದೀಪ್ ಸುರೇಶ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಪ್ರಾಂಶುಪಾಲ ಎಸ್.ಎಂ. ಭೂಷಿ ಅಧ್ಯಕ್ಷತೆ ವಹಿಸಿದ್ದರು.

ಸಹ್ಯಾದ್ರಿ ವಿಜ್ ರಸಪ್ರಶ್ನೆ ಮುಖ್ಯ ಸಂಯೋಜಕಿ ಪ್ರೊ. ಗಾಯತ್ರಿ ಶೆಟ್ಟಿ ಸ್ವಾಗತಿಸಿದರು. ಎಂಬಿಎ ನಿರ್ದೇಶಕ ಡಾ. ವಿಶಾಲ್ ಸಮರ್ಥ ಪರಿಚಯಿಸಿದರು. ಪ್ರೊ. ರಮೇಶ್ ಕೆ.ಜಿ. ವಂದಿಸಿದರು. ಜಾಸನ್ ಪಿಂಟೋ ಮತ್ತು ರುನಾ ಪಿಂಟೊ 1 ನೇ ವರ್ಷದ ಎಂಬಿಎ ಈವೆಂಟ್ ಅನ್ನು ಪ್ರಸ್ತುತಪಡಿಸಿದರು.

ನಂತರ ಕ್ವಿಜ್ ಮಾಸ್ಟರ್ ರಕ್ಷಿತ್ ಶೆಟ್ಟಿ, ಮೊದಲ ಪ್ರಾಥಮಿಕ ಸುತ್ತಿನ ಸ್ಪರ್ಧೆ ನಡೆಸಿದರು. 150 ತಂಡಗಳು ಎರಡನೇ ಪ್ರಾಥಮಿಕ ಸುತ್ತಿನ ಅರ್ಹತೆ ಪಡೆದವು. ಅಂತಿಮವಾಗಿ ಗ್ರ್ಯಾಂಡ್ ಫಿನಾಲೆಗಾಗಿ 6 ತಂಡಗಳನ್ನು ಆಯ್ಕೆ ಮಾಡಲಾಯಿತು.

ಮೈಸೂರಿನ ರಾಮಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮಾರಲ್ ಆಂಡ್ ಸ್ಪಿರಿಚುಯಲ್ ಇನ್‌ಸ್ಟಿಟ್ಯೂಷನ್ ಮತ್ತು ರಾಮಕೃಷ್ಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಜಯರಾಜ್ ರೈ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಸಂಪುಟ Volume 60 | ಸಂಚಿಕೆ Issue 44 | ಪುಟ Pages 12+12
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere

# ಸಂಯುಕ್ತ ಕರ್ನಾಟಕ

samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು
ಶನಿವಾರ 10 Satuarday | ಮಾರ್ಚ್ 2018 March | ₹5–00



ಮದುವೆಯಾದ ಮರು ದಿನವೇ ಬಿಕಾನೇರ್‌ನಲ್ಲಿ ಬಿಎ ಪರೀಕ್ಷೆ ಬರೆಯುತ್ತಿರುವ ಯುವತಿ.

ತ್ರಿಪುರಾದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಬಿಪ್ಲವ್‌ಕುಮಾರ್‌ದೇವ್.



ಅಮೇರಿಕಾ ಸಂಯುಕ್ತ ಸಂಸ್ಥಾನ ಫ್ಲೋರಿಡಾದ ಯೋಗ–ಸಂಸ್ಕೃತ ವಿವಿ ಸಂಸ್ಥಾಪಕ ಮತ್ತು ಚಾನ್ಸೆಲರ್ ಡಾ.ಬಿ.ವಿ.ಕೆ.ಶಾಸ್ತ್ರಿ ಸಹ್ಯಾದ್ರಿಯಲ್ಲಿ ಸಂವಾದ ಕಾರ್ಯಕ್ರಮ ನಡೆಸಿದರು.

## ತಂತ್ರಜ್ಞಾನ ಭಾರತೀಯರ ಸಾಧನೆ

**ಸಂ.ಕ.ಸಮಾಚಾರ, ಮಂಗಳೂರು**

ಅಮೇರಿಕಾ ಸಂಯುಕ್ತ ಸಂಸ್ಥಾನ ಫ್ಲೋರಿಡಾದ ಯೋಗ–ಸಂಸ್ಕೃತ ವಿಶ್ವವಿದ್ಯಾನಿಲಯದ ಸಂಸ್ಥಾಪಕ ಮತ್ತು ಚಾನ್ಸೆಲರ್ ಡಾ.ಬಿ.ವಿ.ಕೆ.ಶಾಸ್ತ್ರಿ ಸಹ್ಯಾದ್ರಿಯಲ್ಲಿ ಸಂವಾದ ಕಾರ್ಯಕ್ರಮ ನಡೆಸಿದರು.

ವಿವಿಧ ಬ್ಯಾಚ್‌ಗಳ ಆಯ್ದ ವಿದ್ಯಾರ್ಥಿಗಳು ಮತ್ತು ಚಾಲೆಂಜರ್ಸ್ ತಂಡದೊಂದಿಗೆ ಬೋಧನಾ ವಿಭಾಗದ ಸದಸ್ಯರು ಭಾಗವಹಿಸಿ ಚರ್ಚೆ ಕಾರ್ಯಕ್ರಮ ಮತ್ತು ಅಧಿವೇಶನದಲ್ಲಿ ಪಾಲ್ಗೊಂಡರು.

ಭಾರತೀಯ ಭಾಷೆಗಳ ಬಗ್ಗೆ ಕೀ ಬೋರ್ಡ್ ಯಂತ್ರದ ಬೇಡಿಕೆಗಳನ್ನು ಬಗೆಹರಿಸಲು ಭಾರತಕ್ಕೆ ಸೂಕ್ತವಾದ ತಂತ್ರಜ್ಞಾನ ಏಕೆ ಅಗತ್ಯವಿದೆ ಎಂಬ ನೇರ ಚರ್ಚೆ ಮತ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಡಾ.ಶಾಸ್ತ್ರಿ ಐದು ವಿದ್ಯಾರ್ಥಿಗಳು ಮತ್ತು ಮೂವರು ಬಾಲಕಿಯರನ್ನು ಆಯ್ಕೆ ಮಾಡಿದರು. ಸಂಶೋಧನೆ, ನವೀನ ವಿನ್ಯಾಸ ಮತ್ತು ತಂತ್ರಜ್ಞಾನ ಭಾಷೆ ಮೂಲಕ ಭಾರತೀಯರನ್ನು ಗುರುತಿಸುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಸಂಪುಟ Volume 60 | ಸಂಚಿಕೆ Issue 44 | ಪುಟ Pages 12+12

epaper.samyukthakarnataka.com

ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

samyukthakarnataka

ಎಂಟು ದಶಕದ ನಂಟು

ಶನಿವಾರ 10 Saturday | ಮಾರ್ಚ್ 2018 March | ₹5-00




ಮದುವೆಯಾದ ಮರು ದಿನವೇ ಬಿಕಾನೇರ್‌ನಲ್ಲಿ ಬಿಎ ಪರೀಕ್ಷೆ ಬರೆಯುತ್ತಿರುವ ಯುವತಿ.

ತ್ರಿಪುರಾದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ವಿಪ್ಲವ್‌ಕುಮಾರ್‌ದೇವ್.

# ವಿಶ್ವ 10k; ಹೆಸರು ನೋಂದಣಿ ಕಾರ್ಯಕ್ಕೆ ಚಾಲನೆ

**ಬೆಂಗಳೂರು:** ವಿಶ್ವದ ರಸ್ತೆ ಓಟಗಳಲ್ಲೇ ಅತ್ಯಂತ ಜನಪ್ರಿಯ ಹಾಗೂ ಒಂದು ದಶಕ ಪೂರೈಸಿ 11ನೇ ಆವೃತ್ತಿಗೆ ಕಾಲಿಡುತ್ತಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ವಿಶ್ವ 10ಕೆಗೆ ಬೆಂಗಳೂರು ನಗರ ಮತ್ತೊಮ್ಮೆ ಆತಿಥ್ಯ ವಹಿಸುತ್ತಿದೆ. ಈ ಸಂಬಂಧ ಓಟದ ಪ್ರಾಯೋಜಕತ್ವ ಹೊಂದಿರುವ ಪ್ರೋಕ್ಯಾಮ್ ಇಂಟರ್‌ನ್ಯಾಷನಲ್, ವಿಶ್ವದ ಅತ್ಯಂತ ಪ್ರತಿಷ್ಠಿತ 10ಕೆ ಓಟಕ್ಕೆ ಮಾರ್ಚ್ 8 ರಂದು ನೋಂದಣಿ ಪ್ರಕ್ರಿಯೆ ಆರಂಭವಾಯಿತು.

ಟಿಸಿಎಸ್ ಬ್ಯಾನರ್ ಅಡಿಯಲ್ಲಿ ಎಂಟು ಬಾರಿ ಆಯೋಜನೆಗೊಂಡಿರುವ ಈ ಟಿಸಿಎಸ್ ವಿಶ್ವ 10ಕೆ ಓಟಕ್ಕೆ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಮೇ 13ರಂದು ಭಾನುವಾರ ಚಾಲನೆ ನೀಡಲಾಗುತ್ತದೆ. ಐಎಎಎಫ್ ಗೋಲ್ಡ್ ಲೇಬಲ್ ರೇಸ್‌ನಲ್ಲಿ ಐದು ವಿಭಾಗಗಳನ್ನು ವರ್ಗೀಕರಿಸಲಾಗಿದೆ. ಆತಿಥೇಯ ದೇಶದ ಓಟಗಾರರು, ವಿಶ್ವದ ಶ್ರೇಷ್ಠ ಟ್ರ್ಯಾಕ್ ಮತ್ತು ಫೀಲ್ಡ್ ಹಾಗೂ ರಸ್ತೆ ಓಟಗಾರರು, ಎಲೈಟ್ ವಿಶ್ವ 10ಕೆ ಪುರುಷ ಮತ್ತು ಮಹಿಳಾ ಓಟಗಾರರು ಈ ರೇಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಮೆಚೂರ್ ರನ್ನರ್ಸ್‌ಗಳು ಓಪನ್ 10ಕೆ ವಿಭಾಗದಲ್ಲಿ ಸ್ಪರ್ಧಿಸಿದರೆ, ಓಟದ ಉತ್ಸಾಹಿಗಳು 5.7 ಕಿ.ಮಿ. ಮಜ್ಜ ರನ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. 4 ಕಿ.ಮಿ. ಹಿರಿಯ ನಾಗರಿಕರ ಓಟದಲ್ಲಿ 60 ವರ್ಷ ಮೇಲ್ಪಟ್ಟ ಮತ್ತು ವಿಶೇಷ ಚೇತನರು ಹಾಗೂ ಅಂಗವಿಕಲರು ಸ್ಪರ್ಧಿಸಬಹುದಾಗಿದೆ.

ಮಾರ್ಚ್ 8ರಂದು ಓಟಗಾರರ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಏಪ್ರಿಲ್ 20ಕ್ಕೆ ಮುಕ್ತಾಯವಾಗಲಿದೆ. ಇಲ್ಲವೇ ರನ್ನಿಂಗ್ ಸ್ಲಾಟ್ ಇರುವವರೆಗೂ ಎಲ್ಲಾ ವಿಭಾಗಗಳ ನೋಂದಣಿ ಮುಂದುವರಿಯಲಿದೆ. ಸೆಲೆಬ್ರಿಟಿ ಹಾಗೂ ನಟ ಪುನೀತ್ ರಾಜ್‌ಕುಮಾರ್ ಟಿಸಿಎಸ್ ವಿಶ್ವ 10ಕೆ ಜತೆಗಿನ ತಮ್ಮ ಬಾಂಧವ್ಯವನ್ನು ಈ ಬಾರಿಯೂ ಮುಂದುವರಿಸಿದ್ದಾರೆ.

11ನೇ ಆವೃತ್ತಿಯ ಟಿಸಿಎಸ್ ವಿಶ್ವ 10ಕೆ ಕುರಿತು ಪ್ರತಿಕ್ರಿಯಿಸಿರುವ ಪುನೀತ್ ರಾಜ್‌ಕುಮಾರ್, ನನ್ನ ವೇಳಾಪಟ್ಟಿಯಲ್ಲಿ ಪ್ರತಿ ವರ್ಷ ಈ ಕೂಟವನ್ನು ಎದುರು ನೋಡುತ್ತಿರುತ್ತೇನೆ. 11ನೇ ಆವೃತ್ತಿಯಲ್ಲಿ ಪಾಲ್ಗೊಳ್ಳುತ್ತಿರುವ ಪ್ರೋಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್, ತೆರೆದ ಕೈಗಳಲ್ಲಿ ಬೆಂಗಳೂರು ವರ್ಷದಿಂದ ವರ್ಷಕ್ಕೆ ನಮ್ಮನ್ನು ಸ್ವಾಗತಿಸುತ್ತಿದೆ. ನಗರದ ಬದ್ಧತೆ ಮತ್ತು ಉತ್ಸಾಹಿಗಳ ಓಟದಿಂದಾಗಿ ಪ್ರತಿವರ್ಷ ಹೊಸ ಓಟದ ಕಥೆಗಳು ಹುಟ್ಟುತಲೇ ಇವೆ. ರನ್ನಿಂಗ್ ವೇಳಾಪಟ್ಟಿಯಲ್ಲಿ ಇದು ಅತ್ಯಂತ ಆಕರ್ಷಣೀಯ ವಾದ ಓಟವಾಗಿದೆ. ಐಎಎಎಫ್ ಗೋಲ್ಡ್ ಲೇಬಲ್ ರೇಸ್ ಶ್ರೇಷ್ಠ ರಸ್ತೆ ಮತ್ತು ಟ್ರ್ಯಾಕ್ ರೇಸ್‌ರ್‌ಗಳನ್ನು ಜಾಗತಿಕವಾಗಿ ಆಕರ್ಷಿಸಿದೆ. ಇದರ ಯಶಸ್ಸು ಎಲ್ಲಾ ಷೇರುದಾರರಿಗೂ, ನಗರ ಅಧಿಕಾರಿಗಳಿಗೂ, ನಮ್ಮ ಪ್ರಾಯೋಜಕರು ಮತ್ತು ಪಾಲುದಾರರಿಗೂ ಹಾಗೂ ನಮ್ಮ ಓಟಗಾರರಿಗೂ ಸಲ್ಲುತ್ತದೆ. ನಿಮ್ಮ ಬೆಂಬಲಕ್ಕೆ ಎಲ್ಲರಿಗೂ ಕೃತಜ್ಞತೆ ಹೇಳಲು ಬಯಸುತ್ತೇನೆ ಎಂದರು.

ಎಲ್ಲ ಮಹಿಳಾ ಪೇಸರ್ ಸಮುದಾಯ ಪಾಲ್ಗೊಳ್ಳುವ ಕುರಿತು ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ಖಚಿತಪಡಿಸಿದೆ. ನಗರದಲ್ಲಿ ಮಹಿಳಾ ರನ್ನಿಂಗ್ ಸಮುದಾಯ ಬೆಳವಣಿಗೆ ಯನ್ನು ಗುರುತಿಸುವ ಭಾಗವಾಗಿ ಈ ವರ್ಷ ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ಓಪನ್ 10ಕೆ ವಿಭಾಗದಲ್ಲಿ ಎಲ್ಲಾ ಮಹಿಳಾ ಸಮುದಾಯದ ಪೇಸರ್ಸ್‌ಗಳು ಪಾಲ್ಗೊಳ್ಳುವುದನ್ನು ಪ್ರಕಟಿಸುತ್ತಿದೆ. 15 ಮಹಿಳಾ ಪೇಸರ್‌ಗಳು 10 ಕಿಲೋ ಮೀಟರ್ ದೂರದಲ್ಲಿ 8 ಸಮಯಾವಗಳಲ್ಲಿ ವಿಭಜನೆಗೊಳ್ಳುತ್ತಾರೆ. 55 ನಿಮಿಷದಿಂದ 75 ನಿಮಿಷ, 60 ನಿಮಿಷದಿಂದ 80 ನಿಮಿಷ, 65 ನಿಮಿಷದಿಂದ 85ನಿಮಿಷ, 70 ನಿಮಿಷದಿಂದ 90 ನಿಮಿಷದವರೆಗೆ ವಿಭಜನೆಯಾಗುತ್ತಾರೆ. ಟಿಸಿಎಸ್ ವಿಶ್ವ 10ಕೆಯಲ್ಲಿ ಪ್ರಾಥಮಿಕವಾಗಿ ಇದನ್ನು ಸೇರಿಸಲಾಗಿದೆ. ಸಮಯಾವ ಪ್ರಮಾಣಪತ್ರ ಇಲ್ಲದೆ ಪಾಲ್ಗೊಳ್ಳುವ ಮಹಿಳಾ ಸ್ಪರ್ಧಿಗಳಿಗೆ ಇದು ಸೀಮಿತವಾಗಿರುತ್ತದೆ. ಎಂದಿನಂತೆ ಟಿಸಿಎಸ್ ವಿಶ್ವ 10ಕೆಯಲ್ಲಿ ಆದ್ಯತೆ ಲೈನ್ ಅಪ್ ಮುಂದುವರಿಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಕರ್ನಾಟಕ ವಿಧಾನಸಭಾ ಚುನಾವಣೆ ಸದ್ಯದಲ್ಲೇ ಜರುಗಲಿದ್ದು, ಇದು ರೇಸ್ ದಿನವೇ ನಡೆಯುವ ಸಾಧ್ಯತೆ ಇದೆ. ಒಂದು ವೇಳೆ ಹೀಗಾದ್ದಲ್ಲಿ ರೇಸ್ ದಿನಾಂಕವನ್ನು ಬದಲಾಯಿಸಲಾಗುತ್ತದೆ. ಈ ಕುರಿತು ಪ್ರೋಕ್ಯಾಮ್ ಇಂಟರ್‌ನ್ಯಾಷನಲ್ ನಿರಂತರವಾಗಿ ಎಲ್ಲಾ ರೀತಿಯ ಅಪ್‌ಡೇಟ್ ನೀಡಲಿದೆ.

